# ನಾಮವನೊದಗಿಸಯ್ಯ ಶ್ರೀಹರಿ ನಿನ್ನ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 67.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 254.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ಮೋಹನ          ತಾಳ: ಅಟ

ನಾಮವನೊದಗಿಸಯ್ಯ ಶ್ರೀಹರಿ ನಿನ್ನ
ನಾಮವನೊದಗಿಸಯ್ಯ     || ಪ ||

ನಾಮವನೊದಗಿಸಯ್ಯ ನಾನೆಂಬ ಕರ್ತೃತ್ವ ಬಿಡಿಸಿ
ಸಾಮಜಪೋಷಕ ನಿನ್ನ ಪಾದಸರಸಿಜಗಳಿಗೆರಗುವೆ     || ಅಪ ||

ಮಾತನಾಡುವಾಗ ಮಲಗುವಾಗ ನಡೆಯುವಾಗ
ಭೀತಿಗೊಂಡಾಗ ಎಡಹಿ ಬೀಳುವಾಗ
ಸೀತಾರಾಮ ಗೋವಿಂದ ಶ್ರೀ ವೈಕುಂಠಾಧೀಶ ಅ-
ನಾಥ ಬಾಂಧವ, ಕೃಷ್ಣಾ, ಕೃಷ್ಣಾ ಎಂದು ಕರೆವ     || 1 ||

ತನು ತಾಳದಂಥ ಕ್ಷುಧೆ ದಾಹ ವಿಕಾರಗ-
ಳನುಭವಿಸುತ ಕಂಗೆಡುವಂಥ ಸಮಯದಲ್ಲಿ
ವನಜನಾಭ ಗೋವಿಂದ, ವಾಣೀಪತಿಪಿತ ಕೃಷ್ಣ

ದನುಜಮರ್ದನ ಭಕ್ತ ವತ್ಸಲನೆಂದು ಕರೆವ ॥ 2 ॥

ಅಸಹ್ಯವಾದ ಜರೆ ರೋಗಂಗಳಾವರಿಸಿ
ಅಸುಗಳು ಕಂಠಗತವಾಗಿ ಧೃತಿತಪ್ಪಿ
ವಿಷಮದೂತನ ಕೈವಶವಪ್ಪ ಸಮಯದಲ್ಲಿ
ಬಿಸಜಾಕ್ಷ ಪುರಂದರ ವಿಠಲನೆಂದು ಕರೆವ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

1. **ಕರ್ತೃತ್ವ** = ಅಹಂಕಾರ
   **ಸಾಮಜ** = ಆನೆ
2. **ಕ್ಷುಧೆ** = ಹಸಿವೆ
   **ದಾಹ** = ನೀರಡಿಕೆ
   **ವಾಣೀಪತಿ** = ಬ್ರಹ್ಮ
3. **ಅಸು** = ಜೀವ
   **ವಿಷಮದೂತ** = ಯಮದೂತ

**Classification:** Keerthane
**Ankita:** purandara vittala
**Location:** NA
**Category:** Mahatmya Gynana, Jeevanoddhara
**Sub-Category:** Krishna, gaja, kamala, nidde, bhaya, sita, rama, govinda, vaikunta, hasive, Narayana, jiva, yama, roga, kai,
**Pravachana:** NA
**Explanation:** NA